**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**

**<u>ಹುಕ್ಕೇರಿ</u>**

**ಸಿಸಿ ನಂ ಃ 942/2024**

**ಸಿಡಬ್ಲು ಃ 2**

**ಪಿಡಬ್ಲು ಃ 3**

**ಹೆಸರು** ಃ ಅಶೋಕ ಶಿವಪುತ್ರ ನೋಗಿನಹಾಳ

**ವಯಾ** ಃ 38 ವರ್ಷ

**ಉದ್ಯೋಗ** ಃ ಕೂಲಿ ಕೆಲಸ

**ವಾಸ** ಃ ಯರಗಟ್ಟಿ ತಾಃ ಹುಕ್ಕೇರಿ

**(ದಿನಾಂಕಃ 14-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**<u>ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ</u>**

ಚಾಸಾ-3 ನಮ್ಮ ಊರಿನವರು. ನನಗೆ ಪರಿಚಿತರು. ದಿನಾಂಕ 14-2-2024 ರಂದು ಯಮಕನಮರಡಿ ಪೋಲಿಸರು ಯರಗಟ್ಟಿ ಗ್ರಾಮದ ಬಡಕುಂದ್ರಿ ಹೊಸೂರು ರಸ್ತೆಯಲ್ಲಿರುವ ತೋಟದ ಹತ್ತಿರ ಫಿರ್ಯಾದಿ ಕಮಲವ್ವ ಗಂಡ್ರೊಳ್ಳಿ ಇವರ ಮನೆಯ ಮುಂಭಾಗ , ಚಾಸಾ-1 ರವರು ಇದೇ ಸ್ಥಳದಲ್ಲಿ ಗಲಾಟೆ ಆಗಿದೆ ಎಂದು ಪೋಲಿಸರಿಗೆ ತೋರಿಸಿದರು. ಅಲ್ಲಿ ಪೋಲಿಸರು ಕಲ್ಲು ಮತ್ತು ಬಡಿಗೆಯನ್ನು ಜಪ್ತಿ ಮಾಡಿದರು. ಸದರಿ ಕಲ್ಲು ಮತ್ತು ಬಡಿಗೆ ನ್ಯಾಯಾಲಯದ ಮುಂದೆ ನೋಡುತಿದ್ದೇನೆ . ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಅಲ್ಲಿ ಫೋಟೊ ತೆಗೆದರು.

ಸದ್ರಿ ಪಂಚನಾಮೆ ನೋಡುತ್ತಿದ್ದೇನೆ . ಅದನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅಲ್ಲಿ ತೆಗೆದಂತಹ ಫೋಟೊವನ್ನು ಈಗಾಗಲೇ ನಿ.ಪಿ-3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ.

<u>**ಪಾಟಿ ಸವಾಲುಃ** ಆರೋಪಿ ಪರ ಶ್ರೀಮತಿ ಎನ್ ಕೆ ಎಚ್ ವಕೀಲರಿಂದ -</u>

ಪಂಚನಾಮೆಯಲ್ಲಿ ಬರೆದ ವಿಚಾರವನ್ನು ನನಗೆ ಪೋಲಿಸರು ಓದಿ ಹೇಳಿದರು. ಆ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಬರೆದ ವಿಚಾರ ನನಗೆ ಈಗ ನೆನಪಿಲ್ಲ. ಆ ಜಾಗದ ಚಕಬಂದಿ ಹೇಳಲು ಬರುವುದಿಲ್ಲ. ಪಂಚನೆಮಯನ್ನು ಬರೆದ ಯಾವುದೇ ವಿಚಾರ

ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಇವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**